**ಬಿ.ಬಿ.ಎಂ.ಪಿ ಮಹದೇವಪುರವಲಯ, ವಾರ್ಡ್ ನಂ. 52, ಕೆ.ಆರ್ ಪುರ, ದಿ:05/01/2019 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು**

******

ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಹಾಗೂ ಅಧಿಕಾರಿಗಳು

ಶ್ರೀಮತಿ. ಕೆ. ಪೂರ್ಣಿಮಾ,
ಶ್ರೀಮತಿ. ಉಮಾಸಂತೋಷ್
ಶ್ರೀಮತಿ. ದೇವಿ. ಟಿ.ಎಸ್
ಶ್ರೀ. ಶೇಖರ್
ಶ್ರೀ. ಪುರುಷೋತ್ತಮ್
ಶ್ರೀ. ಕೇಶವಮೂರ್ತಿ

ಹಾಜರಿದ್ದ ಅಧಿಕಾರಿಗಳು

ಶ್ರೀ. ಜಗದೀಶ ಎಂ. ವಾರ್ಡ್ 52. ಸಹಾಯಕ ಅಭಿಯಂತರರು
ಶ್ರೀ. ದಿನೇಶ್. ಸಹಾಯಕ ಅಭಿಯಂತರರು (ಬೆಂಗಳೂರು ಜಲಮಂಡಳಿ)
ಶ್ರೀ. ಮುಕುಂದಪ್ಪ, ಹಿರಿಯ ಆರೋಗ್ಯ ಪರಿವೀಕ್ಷಕರು. ವಾರ್ಡ್ ನಂ. 52

ದಿ:05/01/2019 ರಂದು ಕೆ.ಆರ್‌ಪುರ ವಿಧಾನಸಭಾ ಕ್ಷೇತ್ರದ ಬಿ.ಬಿ.ಎಂ.ಪಿ ಮಹದೇವಪುರ ವಲಯದ ವಾರ್ಡ್ ನಂ. 52, ಕೆ.ಆರ್ ಪುರದ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು, ವಾರ್ಡ್‌ಸಮಿತಿ ಮತ್ತು ಬಿ.ಬಿ.ಎಂ.ಪಿ ಸದಸ್ಯರಾದಂತಹ ಶ್ರೀಮತಿ. ಕೆ. ಪೂರ್ಣಿಮಾಶ್ರೀನಿವಾಸ & ವಾರ್ಡ್‌ಸಮಿತಿ ಕಾರ್ಯದರ್ಶಿಗಳುರವರ ಸಮ್ಮುಖದಲ್ಲಿ ನಡೆಸಲಾಯಿತು.

ವಾರ್ಡ್ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿಯ ಕುರಿತು ಕೂಲಂಕುಷವಾಗಿ ಚರ್ಚಿಸಲಾಗಿ, ಮನೆ ಮನೆ ಕಸ ಸಂಗ್ರಹ, ರಸ್ತೆ ಬದಿಯ ತ್ಯಾಜ್ಯ ಗಿಡಗಂಟೆಗಳ, ಬ್ಲಾಕ್‌ಸ್ಪಾಟ್‌ಗಳ ತೆರವು ಕಾರ್ಯವು ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿ ಆಗದಿರುವುದು ಕಂಡುಬಂದಿರುತ್ತದೆ. ಸದರಿ ವಿಷಯದ ಬಗ್ಗೆ ಘನ ತ್ಯಾಜ್ಯ ನಿರ್ವಹಣೆ ಸರಬರಾಜುದಾರರಾದ ಅಜಯ್ ಎಂಟರ್‌ಪ್ರೈಸಸ್‌ನ ಶ್ರೀ ರಾಮಯ್ಯರವರಿಗೆ ಹಲವಾರು ಬಾರಿ ವಾರ್ಡಿನ ಆರೋಗ್ಯ ನಿರೀಕ್ಷಕರು ಮತ್ತು ಪಾಲಿಕೆ ಸದಸ್ಯರು ದೂರವಾಣಿ ಮೂಲಕ ಮತ್ತು ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಸರಬರಾಜುದಾರರನ್ನು ಕರೆಸಿ ನ್ಯೂನತೆಗಳ ಬಗ್ಗೆ ತಿಳಿಸಿದರೂ, ಈ ಎಲ್ಲಾ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವುದರಲ್ಲಿ ವಿಫಲರಾಗಿರುತ್ತಾರೆ. ಆದುದರಿಂದ ಸದರಿ ಸರಬರಾಜುದಾರರನ್ನು ವಜಾಗೊಳಿಸಿ, ವಾರ್ಡ್ ಹಾಗೂ ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಸಮರ್ಪಕವಾಗಿ ತ್ಯಾಜ್ಯ ನಿರ್ವಹಣೆ ಕಾರ್ಯ ಮಾಡುವ ಸರಬರಾಜುದಾರರನ್ನು ನೇಮಿಸಲು ದಿ:22/12/2018 ರಂದು ನಡೆದ ಸಭೆಯ ತೀರ್ಮಾನದಂತೆ ತುರ್ತಾಗಿ ಕ್ರಮ ವಹಿಸಲು ಶ್ರೀ. ಮುಕುಂದಪ್ಪ, ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.

ವೆಂಗಯ್ಯನಕೆರೆ ಹಿಂಭಾಗದ ಮೀನಾಕ್ಷಿ ದೇವಸ್ಥಾನದ ಪಕ್ಕದಲ್ಲಿ ಹರಿಯುವ ರಾಜಕಾಲುವೆಯ ಪಕ್ಕ ಪಾರ್ಕ್ ಜಾಗದ ಹತ್ತಿರ ಲಭ್ಯವಿರುವ ಸ್ಥಳದಲ್ಲಿ ಕಸದ ಕಿಯೋಸ್ಕ್ ಘಟಕವನ್ನು ಸ್ಥಾಪಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ವಾರ್ಡ್ ಸದಸ್ಯರಾದ ಶ್ರೀ ಪುರುಷೋತ್ತಮ್ ಮತ್ತು ಸುಕುಮಾರ್ ರವರು ಕೋರಿದರ ಮೇರೆಗೆ ಸಭೆಯಲ್ಲಿ ಇದರ ಸಾಧಕ ಭಾದಕಗಳನ್ನು ಕೊಯೋಸ್ಕ್ ಸಂಸ್ಥೆಯವರೊಡನೆ ಚರ್ಚಿಸಿ

Contd - ②

Scanned by CamScanner

ಕ್ರಮವಹಿಸುವಂತೆ ಶ್ರೀ. ಎಂ. ಜಗದೀಶ, ವಾರ್ಡ್ ಇಂಜಿನಿಯರ್ ಮತ್ತು ಶ್ರೀ. ಮುಕುಂದಪ್ಪ, ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮ ವಹಿಸುವಂತೆ ತಿಳಿಸಲಾಯಿತು.

ಕೆ.ಆರ್ ಪುರ ಪ್ರಥಮದರ್ಜೆ ಕಾಲೇಜಿನ ಆವರಣದಲ್ಲಿ ಲೈಬ್ರರಿ ಕಟ್ಟಡದ ಕೆಲಸ ಪ್ರಾರಂಭಿಸಲಾಗಿದ್ದು, ಕಾಲೇಜಿನ ಪ್ರಾಂಶುಪಾಲರಿಗೆ ಲೈಬ್ರರಿ ಕಟ್ಟಡದ ಬಗ್ಗೆ ದಿನಾಂಕ:09/12/2018 ರಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಪತ್ರ ಬರೆದ ಬಗ್ಗೆ ಗಮನ ಸೆಳೆದು ಪ್ರಾಂಶುಪಾಲರೊಡನೆ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ದಿ:06/12/2018 ರ ಸಭೆಯ ಬಗ್ಗೆ ಗಮನ ಸೆಳೆಯುತ್ತಾ ಇದುವರೆಗೂ ಯಾವುದೇ ಪ್ರಗತಿ ಆಗದಿರುವುದನ್ನು ಗಮನಿಸಿ ಸಭೆಯ ಸದಸ್ಯರು ಆಕ್ಷೇಪ ವ್ಯಕ್ತ ಪಡಿಸಿದ್ದು, ಈಗಾಗಲೇ ಪಿಲ್ಲರುಗಳನ್ನು ಕಟ್ಟಿರುವುದು ಗಮನಿಸಿ ಯಾವುದೇ ಆರ್ಥಿಕ ಪೋಲಾಗದಂತೆ ಅದೇ ಸ್ಥಳದಲ್ಲಿಯೇ ಲೈಬ್ರರಿ ಕಟ್ಟಡವನ್ನು ನಿರ್ಮಿಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು, ಅದರಂತೆ ಕ್ರಮ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸಭೆಯಲ್ಲಿ ಹಾಜರಿದ್ದ ಇಂಜಿನಿಯರ್ ರವರಿಗೆ ಸೂಚಿಸಲಾಯಿತು.

ಬಿ.ಬಿ.ಎಂ.ಪಿ ಕಾಮಗಾರಿಗಳ ಬಗ್ಗೆ 2017–18 ರ ಪಿ.ಒ.ಡಬ್ಲು ಕಾಮಗಾರಿಗಳ ಅಂದಾಜು ಪಟ್ಟಿ ಮಂಜೂರಾಗಿದ್ದು, ಟೆಂಡರ್ ಕರೆದು ಕಾರ್ಯದೇಶ ನೀಡುವ ಪ್ರಕ್ರಿಯೆಯು ಪ್ರಗತಿಯಲ್ಲಿದೆಯೆಂದು ಸಭೆಗೆ ವಾರ್ಡ್ ಇಂಜಿನಿಯರ್ ತಿಳಿಸಿದರು. ಮುಂದುವರೆದು 2018–19 ನೇ ಸಾಲಿನ ಕಾಮಗಾರಿಗಳ ಪಟ್ಟಿಯನ್ನು ಆಯುಕ್ತರ ಕಚೇರಿಗೆ ನೀಡಲಾಗಿದ್ದು, ಜಾಬ್‌ಕೋಡ್ ನೀಡುವ ಹಂತದಲ್ಲಿದೆಯೆಂದು ಸಭಗೆ ತಿಳಿಸಿದರು. ಪಿ ಕೋಡ್ ಪಿ – 3520 ಮತ್ತು ಪಿ – 3443 ಮತ್ತು 14 ನೇ ಹಣಕಾಸು ಕಾಮಗಾರಿಗಳ ಒಟ್ಟು 4.5 ಕೋಟಿ ವೆಚ್ಚದ ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಲಾಗಿದ್ದು, ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪ್ರಕ್ರಿಯೆ ಪ್ರಗತಿಯಲ್ಲಿದೆಯೆಂಧು ತಿಳಿಸಲಾಯಿತು.

| | |
|---|---|
| ಶ್ರೀಮತಿ. ಕೆ. ಪೂರ್ಣಿಮಾ | ಶ್ರೀ. ಜಗದೀಶ.ಎಂ, |
| ಅಧ್ಯಕ್ಷರು, ವಾರ್ಡ್‌ಸಮಿತಿ | ಕಾರ್ಯದರ್ಶಿ |
| ವಾರ್ಡ್ 52, ಕೆ.ಆರ್ ಪುರ | ಕೆ.ಆರ್ ಪುರ ವಾ. 52 |

ಪ್ರತಿಯನ್ನು:–
ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ಕೇಂದ್ರಕಚೇರಿ, ಬೆಂಗಳೂರು
ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರವಲಯ, ಬೆಂಗಳೂರು
ಅಧೀಕ್ಷಕ ಅಭಿಯಂತರರು, ಮಹದೇವಪುರವಲಯ, ಬಿ.ಬಿ.ಎಂ.ಪಿ ಬೆಂಗಳೂರು
ಸಹಾಯಕ ಕಾರ್ಯಪಾಲಕ ಅಭಿಯಂತರರು, (ಘ.ತ್ಯಾ.ನಿ) ಕೆ.ಆರ್ ಪುರ ವಿಭಾಗ, ಬೆಂಗಳೂರು

Scanned by CamScanner